
# ಪುಸ್ತಕ ಪರಿಚಯ

# ಕೃಷ್ಣ ಸಂದೇಶ – ರಾಮಕೃಷ್ಣ ಉಪದೇಶ

ಡಾ. ಎಚ್. ಪಾಂಡುರಂಗ ವಿಠಲ

**ಕೃಷ್ಣ ಸಂದೇಶ – ರಾಮಕೃಷ್ಣ ಉಪದೇಶ**
**ಲೇಖಕರು:** ಸ್ವಾಮಿ ರಾಘವೇಶಾನಂದ
**ಪ್ರಕಾಶಕರು:** ರಾಮಕೃಷ್ಣ ಮಿಷನ್ ಆಶ್ರಮ,
ಕೋಟೆ, ಬೆಳಗಾವಿ –590016
**ಪುಟಗಳು:** 365; **ಬೆಲೆ:** ರೂ.150/–




**ತ**ಮಿಳುನಾಡಿನ ತಿರುಚಿಯ ಶ್ರೀರಾಮಕೃಷ್ಣ ತಪೋವನದ ಸ್ವಾಮಿ ಚಿದ್ಭವಾನಂದರು ಕೆಲವು ದಶಕಗಳ ಹಿಂದೆ ಇಂಗ್ಲಿಷಿನಲ್ಲಿ ವಿಶಿಷ್ಟ ರೀತಿಯ ಭಗವದ್ಗೀತೆಯನ್ನು ತುಂಬ ಕಡಮೆ ಬೆಲೆಯಲ್ಲಿ ಹೊರತಂದಿದ್ದರು. ಭಗವದ್ಗೀತೆಯ ಪ್ರತಿ ಶ್ಲೋಕಕ್ಕೂ ಭಾಷ್ಯ, ಅರ್ಥಗಳ ಜತೆಗೆ ಅದಕ್ಕೆ ಹೊಂದುವ ಶ್ರೀರಾಮಕೃಷ್ಣರ ಸೂಕ್ತಿಗಳನ್ನು ಅದರಲ್ಲಿ ಮುದ್ರಿಸಲಾಗಿತ್ತು. ಈ ಕೃತಿ ಬಹಳ ಜನಪ್ರಿಯವಾಯಿತು. ಹಲವು ವರ್ಷಗಳಿಂದ ಪ್ರತಿ ಪುಟದಲ್ಲೂ ಭಗವದ್ಗೀತೆಯ ಶ್ಲೋಕಗಳನ್ನು ಹೊಂದಿರುವ 'ಗೀತಾ ಸಂವತ್ಸರ' ದಿನಚರಿಯನ್ನು ಗೀತಾ ಪ್ರೆಸ್ ಹೊರತರುತ್ತಿದೆ. ಇದರಿಂದ ದಿನಕ್ಕೆ ಒಂದು ಗೀತಾಶ್ಲೋಕವನ್ನು ಮನನ ಮಾಡುವ ಅಭ್ಯಾಸವಾಗುತ್ತದೆ. ಇದೂ ಜನಕ್ಕೆ ಹಿಡಿಸಿದೆ.

ಈ ವರ್ಷ ಸ್ವಾಮಿ ರಾಘವೇಶಾನಂದಜಿ ಮಹಾರಾಜ್ ಕನ್ನಡದಲ್ಲಿ **'ಕೃಷ್ಣ ಸಂದೇಶ – ರಾಮಕೃಷ್ಣ ಉಪದೇಶ'** ವನ್ನು ಪ್ರಕಟಿಸಿದ್ದಾರೆ. ಗೀತೆಯಿಂದ ಆಯ್ದ ೩೬೫ ಮುಖ್ಯ ಶ್ಲೋಕಗಳಿಗೆ ಅರ್ಥ ನೀಡಿ, ಆ ಶ್ಲೋಕಕ್ಕೆ ಹೊಂದುವ ಶ್ರೀರಾಮಕೃಷ್ಣರ ಆಯ್ದ ದಿವ್ಯವಾಣಿಗಳನ್ನು ಆಯಾ ಪುಟದ ಕೆಳಭಾಗದಲ್ಲಿ ನೀಡಿದ್ದಾರೆ. ಶ್ರೀಕೃಷ್ಣ ಹಾಗೂ ಶ್ರೀರಾಮಕೃಷ್ಣರ ಮಾತುಗಳ ಸಂದರ್ಭಗಳು ಭಿನ್ನವಾದರೂ ಸಾಮ್ಯ ಚೆನ್ನಾಗಿದೆ. ಶ್ರೀರಾಮಕೃಷ್ಣ ವಚನವೇದದ ಸೂಕ್ತಿಗಳನ್ನು ಮಾತ್ರ ಬಳಸಿರುವುದರಿಂದ ಆಸಕ್ತ ಓದುಗರು ಅದನ್ನು ತೆಗೆದು ನೋಡಬಹುದು. ಸ್ವಾಮಿ ಹರ್ಷಾನಂದಜಿಯವರು ತಮ್ಮ ಮುನ್ನುಡಿಯಲ್ಲಿ ಈ ಪುಸ್ತಕವನ್ನು ಬಳಸುವ ಎರಡು ರೀತಿಗಳನ್ನು ತಿಳಿಸಿದ್ದಾರೆ : ಆಯಾ ದಿನದ ದಿನಾಂಕದಂತೆ ತೆಗೆದು ಓದುವುದು ಅಥವಾ ಮನಸ್ಸಿಗೆ ಬೇಸರವೋ ದುಗುಡವೋ ಆಗಿರುವಾಗ ಪರಮಹಂಸರನ್ನು ನೆನೆಸಿಕೊಂಡು, ದಾರಿ ತೋರಿಸಿರೆಂದು ಪ್ರಾರ್ಥಿಸಿಕೊಂಡು, ಇದ್ದಕ್ಕಿದ್ದಂತೆಯೇ ಪುಸ್ತಕವನ್ನು ತೆರೆಯುವುದು. ಆಗ ಆ ಪುಟದಲ್ಲಿ ನಮಗೇ ಅನ್ವಯಿಸುವಂತಹ ಪರಿಹಾರವೋ ಉಪದೇಶವೋ ಸಿಕ್ಕಿದರೆ ಆಶ್ಚರ್ಯಪಡಬೇಕಾಗಿಲ್ಲ!

ಹಿಂದೆ ಮಕ್ಕಳಿಗೆ ನಿತ್ಯವೂ ಬೆಳಗ್ಗೆ ಸಂಜೆ ಸ್ತೋತ್ರಗಳು, ಸುಭಾಷಿತಗಳು, ಭಗವದ್ಗೀತೆಯ ಭಾಗಗಳು ಮುಂತಾದವನ್ನು ಕಂಠಪಾಠ ಮಾಡಿಸುವ ಸಂಪ್ರದಾಯವಿತ್ತು. ಇವು ನೆನಪಿನಲ್ಲಿ ನಿಂತರೆ, ಎಂದಾದರೊಮ್ಮೆ ಮಕ್ಕಳು ಇವುಗಳನ್ನು ಅರ್ಥಮಾಡಿಕೊಂಡು ಮುಂದಿನ ಅವರ ಜೀವನಕ್ಕೆ ಮಾರ್ಗದರ್ಶಕವಾಗುವುದೆಂಬ ಯೋಚನೆ ಹಿರಿಯರದು. ಈ ವಿಧಾನದಲ್ಲಿ ದಿನಕ್ಕೊಂದು ಶ್ಲೋಕವನ್ನು ಮನನ ಮಾಡಿ, ಕಂಠಪಾಠ ಮಾಡಲು ಈ ಪುಸ್ತಕ ಸಹಾಯಕ. ಶ್ಲೋಕಗಳ ಆಯ್ಕೆಯೂ ಸೊಗಸಾಗಿದೆ; ಮುಖ್ಯವಾದ ಯಾವ ಶ್ಲೋಕವನ್ನೂ ಬಿಟ್ಟಿಲ್ಲ. ಆದರೆ ಅರ್ಜುನ ವಿಷಾದಯೋಗವನ್ನು ಮಾತ್ರ ಬಿಟ್ಟಿದೆ. ಗೀತೆಯ ಸಾರವನ್ನು ಹೇಗೆ ಸಂಗ್ರಹಿಸಿದ್ದಾರೆಂದರೆ ವಿಶ್ವರೂಪದರ್ಶನ ಅಧ್ಯಾಯದ ೫೫ ಶ್ಲೋಕಗಳಲ್ಲಿ, ಆರನ್ನು ಮಾತ್ರ ತೆಗೆದುಕೊಳ್ಳಲಾಗಿದೆ. ಈ ಆರರಲ್ಲೂ ಎರಡು ಶ್ಲೋಕ ಅರ್ಜುನನದು. ಆದರೆ ಅಭ್ಯಾಸಯೋಗ ಅಧ್ಯಾಯದ ೪೭ ಶ್ಲೋಕಗಳಲ್ಲಿ ೪೧ ನ್ನು ಆರಿಸಿದ್ದಾರೆ. ಹೀಗೆ ಭಗವದ್ಗೀತೆಯನ್ನು ಬಹಳ ಗಮನವಿಟ್ಟು ಇಲ್ಲಿ ಸಂಗ್ರಹಿಸಿದ್ದಾರೆ ಎನ್ನಬಹುದು.

ಈ ಪುಸ್ತಕ ಅತ್ಯಂತ ಜನಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ಕಾರಣ ಇಲ್ಲಿ ಭಗವದ್ಗೀತೆಯ ಶ್ಲೋಕಗಳಿಗೆ ಅತ್ಯಂತ ಸರಳ


ಮಾನ್ಯ ಲೇಖಕರು ಕನ್ನಡ ಅಧ್ಯಾಪಕರು; ಇವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ; ಇವರು ಆಶ್ರಮದ ಭಕ್ತರು.

ಕನ್ನಡದಲ್ಲಿ ಅನುವಾದವನ್ನು ನೀಡಲಾಗಿದೆ. ಅದರಿಂದ ಮನನ ಮಾಡುವುದು ಸುಲಭ. ಇನ್ನು ಶ್ರೀರಾಮಕೃಷ್ಣ ವಚನವೇದದ ಭಾಷೆಯ ಜೀವಂತಿಕೆಯ ಬಗ್ಗೆ ಹೇಳಬೇಕಾದುದು ಏನೂ ಇಲ್ಲ. ಎಷ್ಟೋ ಬಾರಿ ಭಗವದ್ಗೀತೆಯ ಮೂಲ ಶ್ಲೋಕಗಳ ಅರ್ಥವನ್ನು ಇಲ್ಲಿ ಕೊಟ್ಟಿರುವ ಶ್ರೀರಾಮಕೃಷ್ಣರ ಸೂಕ್ತಿಗಳು ವಿವಿಧ ಆಯಾಮಗಳಲ್ಲಿ ವಿಸ್ತರಿಸುತ್ತವೆ ಎಂದು ಹೇಳಬಹುದು.

ಪುಟ ೨೫೩–೨೫೪ ರಲ್ಲಿ ಕೊಟ್ಟಿರುವ ಅಭ್ಯಾಸಯೋಗದ ಶ್ಲೋಕಗಳನ್ನು ಹಾಗೂ ಅದಕ್ಕೆ ಸಂಬಂಧಿಸಿದ ಶ್ರೀರಾಮಕೃಷ್ಣರ ಉಪದೇಶಗಳನ್ನು ಗಮನಿಸಿ. ಶ್ರೀರಾಮಕೃಷ್ಣರು ಅನುಭವ–ಅನುಭಾವ ಲೋಕದಲ್ಲಿದ್ದವರು. ಅದಕ್ಕೇ ಅವರು, ಅವಲಕ್ಕಿ ಕುಟ್ಟುವ ಯಂತ್ರಕ್ಕೆ ಭತ್ತ ತಳ್ಳುತ್ತ, ಅದೇ ಸಮಯದಲ್ಲಿ ವ್ಯಾಪಾರ ಮಾಡುತ್ತ, ಹಾಗೆಯೇ ಮಗುವಿಗೆ ಹಾಲೂಡಿಸುವುದನ್ನೂ ಮಾಡುತ್ತಿರುವ ಹೆಂಗಸಿನ ದೃಷ್ಟಾಂತವನ್ನು ಕೊಟ್ಟು, ಅಭ್ಯಾಸಯೋಗದ ಅರ್ಥ ಮಾಡಿಸಲು ಸಮರ್ಥರಾಗಿದ್ದಾರೆ. ಚಿತ್ತದ ಸಮಾಧಾನ ಕೆಡುವುದು ಕೆಲಸದಲ್ಲಿ ಅವಧಾನ ಇರದೇ ಇದ್ದಾಗ ಮಾತ್ರ. ಮಾನನೀಯ ಶ್ರೀ ಡಿ.ವಿ.ಜಿ. ಈ ರೀತಿ ಹೇಳುತ್ತಾರೆ:

**ಎರಡು ಕೋಣೆಗಳ ನೀಮಾಡು ಮನದಾಲಯದಿ**
**ಹೊರಕೋಣೆಯಲಿ ಲೋಗರಾಟಗಳನಾಡು**
**ವಿರಮಿಸೊಬ್ಬನೆ ಮೌನದೊಳಮನೆಯ ಶಾಂತಿಯಲಿ**
**ವರಯೋಗಸೂತ್ರವಿದು – ಮಂಕುತಿಮ್ಮ**

ನಿಜಜೀವನದಲ್ಲಿ ಕಲ್ಮಷವಿಲ್ಲದೆ ಸರಳವಾಗಿ ಬದುಕುವುದು ಹೇಗೆ ಎಂದು ಭಗವದ್ಗೀತೆ ಇಲ್ಲಿ ತೋರಿಸುತ್ತದೆ. ಸ್ವಭಾವಕ್ಕನು ಗುಣವಾಗಿ ಕರ್ಮ ಮಾಡುವ, ಎಲ್ಲ ಕರ್ಮಗಳ ಫಲವನ್ನು ಭಗವಂತನಿಗೆ ಅರ್ಪಿಸುವ ಮಾತು ಮುಂದಿನ ಪುಟದಲ್ಲೆ ಬರುತ್ತದೆ. ಅಭ್ಯಾಸಯೋಗದ ಈ ಶ್ಲೋಕಗಳ ಅರ್ಥ ನಮಗೆ ಮನಸ್ಸನ್ನು ತಟ್ಟುವುದು ಶ್ರೀರಾಮಕೃಷ್ಣರ ಮಾತಿನಿಂದ ಮಾತ್ರ.

ಈ ರೀತಿಯ ಹೊಸ ಅರ್ಥ ಅಗತ್ಯವಿತ್ತೆ ಎಂಬ ಪ್ರಶ್ನೆ ಏಳಬಹುದು. ಆದರೆ ಜೀವನದ ಕಠಿಣ ಸಂದರ್ಭಗಳಲ್ಲಿ ಗೀತೆಯ ಶ್ಲೋಕಗಳು ತಮಗೆ ಮಾರ್ಗದರ್ಶನ ಮಾಡಿ ಮನಶ್ಶಾಂತಿ ನೀಡಿದವೆಂದು ಮಹಾತ್ಮ ಗಾಂಧಿಯವರಿಂದ ಮೊದಲುಗೊಂಡು ಅನೇಕ ಧೀಮಂತರು ತಮ್ಮ ಅನುಭವಗಳನ್ನು ಬರೆದಿದ್ದಾರೆ. ಅನುವಾದ, ಭಾಷ್ಯಗಳಿಗೆ ನಿಲುಕದ ರೀತಿಯ ವ್ಯಾಪಕ ಅರ್ಥಗಳನ್ನು ಕ್ಲಿಷ್ಟ ಸಂದರ್ಭಗಳಲ್ಲಿ ಜನ ಕಂಡುಕೊಳ್ಳುತ್ತಾರೆ. ಇಂಥ ಪ್ರಾಮಾಣಿಕ ಹಾಗೂ ಜೀವನ್ಮುಖಿ ಪ್ರಯತ್ನಗಳಿಗೆ **'ಕೃಷ್ಣ ಸಂದೇಶ – ರಾಮಕೃಷ್ಣ ಉಪದೇಶ'** ಗಳಂತಹ ಸರಳ ಗ್ರಂಥಗಳು ಆಸ್ಪದ ನೀಡುತ್ತವೆ.

ನನ್ನ ಹಿರಿಯ ಸ್ನೇಹಿತರೊಬ್ಬರ ಅನುಭವ ಹೀಗಿದೆ: ಪ್ರಸಿದ್ಧ ತಾಂತ್ರಿಕ ಸಂಸ್ಥೆಯಲ್ಲಿ ಜನಪ್ರಿಯ ಪ್ರಾಧ್ಯಾಪಕರಾಗಿದ್ದ ಅವರನ್ನು ಅವರ ಅರಿವಿಗೇ ಬಾರದಂತೆ ತುಳಿದಿಡಲಾಗಿತ್ತು. ಇದು ಗೊತ್ತಾದಾಗ, ಆ ಸಂಸ್ಥೆಯಲ್ಲಿ ಇರುವುದೋ ಬಿಡುವುದೋ ಎಂಬ ಸಂದಿಗ್ಧ ಅವರಿಗುಂಟಾಯಿತು. ಆ ಸಂದರ್ಭದಲ್ಲಿ ಅವರಿಗೆ ನೆರವಿಗೆ ಬಂದದ್ದು **'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ.......'** ಎಂಬ ಗೀತಾಶ್ಲೋಕ. ಇದಕ್ಕೆ ಅವರು ಕಂಡುಕೊಂಡ ಅರ್ಥವಿದು: ಯಾವ ಕೆಲಸದಿಂದ ಒಬ್ಬನ ಸತ್ವವು ಪರಿಪೂರ್ಣ ಅಭಿವ್ಯಕ್ತಿಯನ್ನು ಕಂಡುಕೊಂಡು, ಆನಂದ ಸಾರ್ಥಕತೆಗಳನ್ನು ಕಾಣುತ್ತದೆಯೋ ಅದೇ ದೇವರು. ಉಳಿದೆಲ್ಲವನ್ನೂ ಬಿಟ್ಟು ಅದೊಂದಕ್ಕೇ ಶರಣಾಗಬೇಕು. ಅದು ನಮ್ಮನ್ನು ಕಾಪಾಡುತ್ತದೆ. ಹೀಗಾಗಿ ಇನ್ನೂ ಹತ್ತು ವರ್ಷ ಸೇವಾವಧಿ ಇದ್ದರೂ ಆ ಸಂಸ್ಥೆಗೆ ರಾಜೀನಾಮೆ ನೀಡಲು ಅವರು ನಿರ್ಧರಿಸಿದರು. ಆರು ತಿಂಗಳಲ್ಲೇ ಇಂಗ್ಲೆಂಡಿನ ಕಂಪೆನಿಯೊಂದು ಅವರನ್ನು ತನ್ನ ಗುಣ ನಿಯಂತ್ರಣ ವಿಭಾಗದ ಮುಖ್ಯಸ್ಥರನ್ನಾಗಿ ಆರಿಸಿತು. ಕೆಲ ವರ್ಷಗಳ ಬಳಿಕ ಭಾರತಕ್ಕೆ ಮರಳಿದ ಅವರು ಈಗ ಪ್ರಸಿದ್ಧ ತರಬೇತಿ ಸಲಹೆಗಾರರಾಗಿದ್ದಾರೆ. ಈ ತರಹದ ಅನೇಕ ಉದಾಹರಣೆಗಳನ್ನು ನೀಡಬಹುದು. ಕೇವಲ ತಾತ್ತ್ವಿಕ ಗ್ರಂಥ ಎಂಬ ತಪ್ಪು ಕಲ್ಪನೆ ಇರುವ ಭಗವದ್ಗೀತೆ ಹೀಗೆ ಪ್ರಾಯೋಗಿಕವಾಗಿ ಜೀವನದ ಸಂದಿಗ್ಧ ಘಟ್ಟಗಳಲ್ಲಿ ನೆರವು ನೀಡುವುದು ಪರಮಾಶ್ಚರ್ಯಕರ.

ಸ್ವಾಮಿ ರಾಘವೇಶಾನಂದಜಿಯವರು ಕನ್ನಡ ಓದುಗರಿಗೆ ಕೃಷ್ಣನ ಇಂತಹ ಅದ್ಭುತ ಸಂದೇಶಗಳನ್ನೂ ಅದರ ಜತೆ ಮನನ ಮಾಡಲು ಅವುಗಳಿಗೆ ಅನ್ವಯವಾಗುವ, ಈ ಯುಗದ ಅವತಾರರಾದ ಶ್ರೀರಾಮಕೃಷ್ಣರ ಉಪದೇಶಗಳನ್ನೂ ನೀಡಿ ಕನ್ನಡ ನಾಡಿಗೆ ಅಮೂಲ್ಯ ಕೊಡುಗೆಯನ್ನಿತ್ತಿದ್ದಾರೆ. ಅತ್ಯುತ್ತಮ ಮುದ್ರಣ, ಹಲವು ವರ್ಷಗಳ ನಿರಂತರ ಬಳಕೆಗೆ ಅನುವಾಗುವಂತೆ ಉತ್ತಮ ಕಾಗದ, ದಪ್ಪ ರಟ್ಟು ಮೊದಲಾದ ವೈಶಿಷ್ಟ್ಯಗಳೊಡನೆ ಬಂದಿರುವ ಈ ಪುಸ್ತಕದ ಬೆಲೆಯೂ ಹೆಚ್ಚಿಲ್ಲ. ಒಟ್ಟಿನಲ್ಲಿ ಕೃಷ್ಣಭಕ್ತರಿಗೂ, ರಾಮಕೃಷ್ಣಭಕ್ತರಿಗೂ – ಅಷ್ಟೇಕೆ ಜಿಜ್ಞಾಸುಗಳಾದ ಎಲ್ಲರಿಗೂ ಆಪ್ಯಾಯಮಾನವಾಗುವ ಜೀವನದರ್ಶನ ಗ್ರಂಥ ಇದು.

## ಮೈಸೂರು ಆಶ್ರಮದ ವಿಶೇಷ ಕಾರ್ಯಕ್ರಮಗಳು

**ಮೇ 2009**

| | | |
|---|---|---|
| 5 | ಮಂಗಳವಾರ | ಏಕಾದಶಿ |
| 9 | ಶನಿವಾರ | ಶ್ರೀಬುದ್ಧ ಜಯಂತಿ |
| 20 | ಬುಧವಾರ | ಏಕಾದಶಿ |

ಆಶ್ರಮದಲ್ಲಿ ಪ್ರತಿ ಶನಿವಾರ ಇಂಗ್ಲಿಷಿನಲ್ಲಿ ಮತ್ತು ಭಾನುವಾರ ಕನ್ನಡದಲ್ಲಿ ಸಂಜೆ 6.00 ಗಂಟೆಯಿಂದ 7.00 ಗಂಟೆಯವರೆಗೆ ಪ್ರವಚನಗಳು ಇರುತ್ತವೆ. ಪ್ರತಿ ಏಕಾದಶಿಯ ದಿನದಂದು 'ರಾಮನಾಮ ಸಂಕೀರ್ತನೆ' ನಡೆಯುತ್ತದೆ.

**ಸರ್ವರಿಗೂ ಆದರದ ಸುಸ್ವಾಗತ**